Deccan Herald
G

Thursday, June 30, 2016



# Varsity proposes to set up academic staff training college

## GU to sign MoU with Bolton University

**KALABURAGI: The Gulbarga University has proposed to set up an Academic Staff Training College in its main campus to train college teachers of different faculties and keep them abreast of latest developments in teaching.**

Disclosing this to media persons here on Wednesday, University Vice Chancellor S.R.Niranjana said that a proposal will be soon sent to the Karnataka State Higher Education Council which in turn will recommend to the state government. The university has considered the demand seriously as it will help in enhancing the teaching skills of college teachers of the backward Hyderabad Karnataka region which will ultimately lead to enhancement of standard and quality in higher education.The demand for establishing the ASTC has come from the Hyderabad Karnataka Government College Teachers' Association. The Association submitted a memorandum in this regard to the VC on Wednesday. Meanwhile, Prof Niranjana said, Ajim Premji University, a private university in the State, has volunteered to conduct teachers training programme for college teachers of the affiliated colleges of the Gulbarga university. Teachers from four colleges of each of the four districts Bidar, Kalaburagi, Yadgir and Raichur will be selected for one day workshop. The programme is in accordance with the state government's policy of each university of the state to join hands with three private universities for joint academic ventures.

Prof Niranjana revealed that the Gulbarga University will enter into a memorandum of understanding (MoU) with the University of Bolton, Greater Manchester, England, for training the teachers of Gulbarga university. The University of Bolton will be working with five universities of Karnataka including the Gulbarga university. Teachers of BEd, MEd colleges will be trained.

Prof Niranjana said that a problem has arisen after the government issuing an order to Gulbarga University to consider the students of Karnataka State Women University, Vijayapur, as home university students for admission to post graduation courses and PhD programmes. But this has been opposed by the students of Gulbarga University as the opportunities may go to the Women University graduates. "Since Women University is considered an outside university they should compete among the two seats reserved by every university for the students of outside universities," Prof Niranjana said. Vijayanagar Krishnadevaraya University, Ballari, has also been asked to consider the Women University students as home university students.

In order to find a solution to the problem, Prof Niranjana said, he would take the issue to Karnataka State Higher Education Council. Registrar Dayanand Agasar, Registrar Evaluation C S Patil were present.

**DH News Service**

**ಬದಲಾವಣೆಗೆ ನಾಂದಿ**

■ ಮೌಲ್ಯಮಾಪಕರಿಗೆ 3, ಮೇಲ್ವಿಚಾರಕರಿಗೆ 5 ವರ್ಷ ಕಡ್ಡಾಯ

# ಮೌಲ್ಯಮಾಪನಕ್ಕೆ ಸೇವಾ ಹಿರಿತನ ಕಡ್ಡಾಯ



ಕಲಬುರಗಿ: ಪದವಿ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಲು ಇನ್ನು ಮುಂದೆ ಮೂರು ವರ್ಷದ ಕಡ್ಡಾಯ ಸೇವಾ ಹಿರಿತನ ಹಾಗೂ ಪರೀಕ್ಷಾ ಮೇಲ್ವಿಚಾರಕರಿಗೆ ಐದು ವರ್ಷದ ಸೇವಾ ಹಿರಿತನ ಕಡ್ಡಾಯ ಮಾಡಲಾಗುವುದು ಎಂದು ಗುವಿವಿ ಕುಲಪತಿ ಪ್ರೊ| ಎಸ್.ಆರ್.ನಿರಂಜನ್ ಹೇಳಿದರು.

ಬುಧವಾರ ಗುವಿವಿ ಮಹಾತ್ಮಾಗಾಂಧಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರಿಂದ ಹಾಗೂ ವಿಷಯೇತರರಿಂದ ಪದವಿ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಿಸುವ ಪದ್ಧತಿ ಇತ್ತು. ಆದರಿಂದ, ವಿದ್ಯಾರ್ಥಿಗಳಿಗೆ ಅನ್ಯಾಯ ಆಗುವ ಸಂಭವ ಹೆಚ್ಚಿತ್ತು. ಅದನ್ನು ಇನ್ನು ಮುಂದುವರಿಸುವುದಿಲ್ಲ. ಪಾರದರ್ಶಕತೆ ಉಂಟು ಮಾಡುವ ಮತ್ತು ಫಲಿತಾಂಶದಲ್ಲಿ ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಇನ್ನು ಮುಂದೆ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಲು ಸೇವಾ ಹಿರಿತನವನ್ನು ಕಡ್ಡಾಯ ಮಾಡಲಾಗುವುದು ಎಂದರು.

ಉತ್ತರ ಪತ್ರಿಕೆ ಮೌಲ್ಯಮಾಪನಕ್ಕೆ ಬರುವ ಉಪನ್ಯಾಸಕರು ಕಡ್ಡಾಯವಾಗಿ ಆಯಾ ಕಾಲೇಜಿನ ಪ್ರಾಚಾರ್ಯರ ಅನುಮತಿ ಪತ್ರವನ್ನು ತರುವುದನ್ನು ಕಡ್ಡಾಯ ಮಾಡಲಾಗುವುದು ಎಂದರು.

ಪರೀಕ್ಷಾ ವಿಧಾನದಲ್ಲೂ ಬದಲಾವಣೆ ತರುವ ನಿಟ್ಟಿನಲ್ಲಿ ಆಲೋಚನೆ ಮಾಡಲಾಗುತ್ತಿದೆ. ಈ ಹಿಂದೆ ನಡೆಯುತ್ತಿದ್ದ ಎಲ್ಲ ನಿಯಮ ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲಾಗುವುದು. ಈಗಿರುವ 185ಪರೀಕ್ಷಾ ಕೇಂದ್ರಗಳನ್ನು 120ಕ್ಕೆ ಇಳಿಸಲಾಗಿದೆ. ಅಲ್ಲದೆ, ಸಾಂಪ್ರದಾಯಿಕ, ಶ್ರಮದಾಯಕ ಪದ್ಧತಿಯಿಂದ ಮುಕ್ತಗೊಳಿಸಿ ವಿದ್ಯುನ್ಮಾನ ಅಂತರ್ಜಾಲ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ ಎಂದರು.

**ಸಮಯದೊಳಗೆ ಫಲಿತಾಂಶ:** ಸರಕಾರದ ಆದೇಶದಂತೆ ಸುಧಾರಣೆ ಮಾಡಲಾಗುತ್ತಿದೆ. ಪ್ರಶ್ನೆ ಪತ್ರಿಕೆಗಳ ಮುದ್ರಣ, ಪರೀಕ್ಷಾ ಕಾರ್ಯನಿರ್ವಹಣೆ, ಪರೀಕ್ಷಕರ ಮತ್ತು ನಿರೀಕ್ಷಕರ ನೇಮಕಾತಿಯಲ್ಲಿ ಶಿಕ್ಷಕರು ಪಾಲ್ಗೊಳ್ಳುವಂತೆ ಮಾಡಿ ವಿವಿಯ ಎಲ್ಲ ಮಹಾವಿದ್ಯಾಲಯಗಳಲ್ಲಿ ಪರೀಕ್ಷೆಗಳನ್ನು ನಿಗದಿತ ಸಮಯದಲ್ಲಿ ಮುಗಿಸಿ ಶೀಘ್ರವೇ ಫಲಿತಾಂಶ ಪ್ರಕಟಿಸುವ ನೀತಿ ಜಾರಿಗೆ ತರಲಾಗುತ್ತಿದೆ ಎಂದರು.

ಈ ಬದಲಾವಣೆಗಳಿಂದ ವಿದ್ಯಾರ್ಥಿಗಳು ವಿವಿಧ ವಿವಿಗಳಲ್ಲಿ ಉನ್ನತ ಶಿಕ್ಷಣಕ್ಕೆ ಹೋಗಲು ಅನುಕೂಲವಾಗುತ್ತದೆ. ಎಲ್ಲ ಫಲಿತಾಂಶಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು. ಅದರೊಂದಿಗೆ ಈ ವರ್ಷದಿಂದ ಬಹುತೇಕ ಎಲ್ಲ ಕೋರ್ಸುಗಳಿಗೆ ಪ್ರವೇಶವನ್ನು ಆನ್‌ಲೈನ್‌ಲ್ಲಿಯೇ ಪಡೆಯಲಾಗುತ್ತಿದೆ. ಮೆರಿಟ್ ಆಧಾರದಲ್ಲಿ ಸೀಟುಗಳ ಲಭ್ಯತೆ ಹಾಗೂ ಇತರೆ ವಿಷಯಗಳು ವಿದ್ಯಾರ್ಥಿಗಳಿಗೆ ಪಾರದರ್ಶಕವಾಗಿ ಲಭ್ಯವಾಗುತ್ತಿದೆ. ಇದರಿಂದ ಸಮಯ ಹಾಗೂ ಭ್ರಷ್ಟಾಚಾರ ದೂರವಾಗಿ ವಿವಿಗೆ ಉತ್ತಮ ಹೆಸರು ಹಾಗೂ ಮಾನ್ಯತೆ ಲಭಿಸುತ್ತದೆ ಎಂದರು.

**ಆಡಳಿತ ಸುಧಾರಣೆ:** ವಿವಿಯಲ್ಲಿ ನಾನು ಬಂದ ಬಳಿಕ ಹಲವಾರು ಆಡಳಿತಾತ್ಮಕ ಸುಧಾರಣೆ ಮಾಡಿದ್ದೇನೆ. ಒಂದೇ ವರ್ಷದಲ್ಲಿ ವಿವಿ ವಾರ್ಷಿಕೋತ್ಸವ, ಅಂತರ ಮಹಾವಿದ್ಯಾಲಯ ಮತ್ತು ಅಂತರ ವಿಶ್ವ ವಿದ್ಯಾಲಯ ಕ್ರೀಡಾಕೂಟ ಆಯೋಜಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ಅಧ್ಯಯನದ ಜೊತೆ ಕ್ರೀಡಾ ಮನೋಭಾವ ಬೆಳೆಸಿಕೊಳ್ಳುವುದರ ಜತೆಗೆ ಸ್ಪರ್ಧಾತ್ಮಕವಾಗಿ ಇರುವುದನ್ನು ಕಲಿಯಲಿ ಎನ್ನುವುದು ನನ್ನ ಉದ್ದೇಶ ಎಂದರು.

ಹಣಕಾಸಿನ ವ್ಯವಹಾರ, ಆಡಳಿತ ಮರು ರಚನೆ, ಹಣಕಾಸು ಅಭಿವೃದ್ಧಿ ಸಿಂಡಿಕೇಟ್ ವಾಸ್ತುಶಿಲ್ಪ ವಿಭಾಗ ಮತ್ತು ವಿವಿಯ ಮುಖ್ಯ ಕಟ್ಟಡವನ್ನು ಮೂರು ಮಜಲುಗಳಲ್ಲಿ ವಿಂಗಡಣೆ ಮಾಡಲಾಗಿದೆ. ಎಲ್ಲ ಅಧ್ಯಯನ ಪೀಠಗಳಿಗೆ ಸ್ವತಂತ್ರವಾದ ಆಯಾಮ ಕಲ್ಪಿಸುವ ನಿಟ್ಟಿನಲ್ಲಿ ಇನ್ನಷ್ಟು ಹೊಸ ಪೀಠೋಪಕರಣ ಸೇರಿದಂತೆ ಇತರೆ ಸೌಕರ್ಯ ಒದಗಿಸಲಾಗಿದೆ ಎಂದರು.

ವಿಶ್ವವಿದ್ಯಾಲಯದ ಕುಲಸಚಿವ ದಯಾನಂದ ಅಗಸರ, ಮೌಲ್ಯಮಾಪನ ಕುಲಸಚಿವ ಡಾ| ಸಿ.ಎಸ್. ಪಾಟೀಲ ಹಾಜರಿದ್ದರು.

ಉದಯವಾಣಿ ಕಲಬುರಗಿ
ಗುರುವಾರ | ಜೂನ್ | 30 | 2016

REGISTRAR
GULBARGA UNIVERSITY
GULBARGA